ಕರ್ನಾಟಕ ಸರ್ಕಾರ

ಸಂಖ್ಯೆ: ಇಪಿ 245 ಪಿಬಿಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:22-07-2021

ಇಂದ:
**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ,
ಬೆಂಗಳೂರು.

ಇವರಿಗೆ :
1) ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು
2) ಅಪರ ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ,ಧಾರವಾಡ./ಕಲಬುರಗಿ

ಮಾನ್ಯರೆ,

ವಿಷಯ:ಅನುದಾನಿತ ಪ್ರಾಥಮಿಕ ಶಾಲಾ ಸಿಬ್ಬಂದಿಯವರು ರಜೆ ಅವಧಿಯಲ್ಲಿ ಕೋವಿಡ್-19 ಕಾರ್ಯದಲ್ಲಿ ಸಮೀಕ್ಷೆ, ನಿರ್ವಹಣೆ ಮಾಡಿರುವುದರಿಂದ ಗಳಿಕೆ ರಜೆ ನೀಡುವ ಕುರಿತು.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಜಿ6:ಶಾಶಿಅ:ಖಾಪ್ರಾಶಾಶಿ:ಗಳಿಕೆ:ರಜೆ:11:2020-21/1727 ದಿನಾಂಕ:23-10-2020.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಣ ಸಿಬ್ಬಂದಿಯವರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯವಾಗುವ ಕೆ.ಸಿ.ಎಸ್.ಆರ್ ನಿಯಮಾವಳಿಗಳನ್ನು ಯಥಾವ್ವಾಗಿ ಅನ್ವಯಿಸಿಕೊಂಡಿದ್ದಲ್ಲಿ, ಬಿಡುವಿನ ಇಲಾಖೆಯ (Vacation department) ವ್ಯಾಪ್ತಿಗೊಳಪಡುವ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರುಗಳನ್ನು ಎನ್.ಡಿ.ಎಂ.ಎ ಅಧಿನಿಯಮದಡಿ ಕೋವಿಡ್-19ರ ಕರ್ತವ್ಯಕ್ಕೆ ನಿಯೋಜಿಸಿದ್ದಲ್ಲಿ, ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರುಗಳ ರಜಾ ಸಹಿತ ಇಲಾಖೆ ಸಿಬ್ಬಂದಿಯಾಗಿರುವುದರಿಂದ ಕೆ.ಸಿ.ಎಸ್.ಆರ್. ನಿಯಮ 113(3)(ಎ)ರನ್ವಯ ಗಳಿಕೆ ರಜೆಗೆ ಅರ್ಹರಾಗಿರುತ್ತಾರೆಂದು ತಿಳಿಸಿದೆ.

ಮುಂದುವರೆದು, ಬಿಡುವಿರುವ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರರುಗಳ ಪ್ರಕರಣಗಳಲ್ಲಿ ಗಳಿಕೆ ರಜೆಯನ್ನು ನಿಯತಗೊಳಿಸುವ ಕುರಿತಾದ ವಿಧಿ ವಿಧಾನಗಳನ್ನು ನಿಯಮ 113ರಡಿಯಲ್ಲಿ ರೂಪಿಸಲಾಗಿದೆ. ಅದರಂತೆ, ಕ.ಸಿ.ಎಸ್.ಆರ್. ನಿಯಮಾವಳಿಯ ನಿಯಮ 113(3)(ಎ)ರನ್ವಯ ಸರ್ಕಾರಿ ನೌಕರನು ಯಾವುದೇ ವರ್ಷದಲ್ಲಿ ಬಿಡುವನ್ನು ಭಾಗಶಃ ಬಳಸಿಕೊಂಡ ಪಕ್ಷದಲ್ಲಿ ಆ ವರ್ಷದಲ್ಲಿ ಬಿಡುವಿನಲ್ಲಿ ಆತ ಬಳಸಿಕೊಳ್ಳದೇ ಇರುವ ಬಿಡುವಿನ ದಿವಸಗಳಷ್ಟಕ್ಕೇ 30 ದಿವಸಗಳ ಅಂಥ ಅನುಪಾತದಲ್ಲಿ ಗಳಿಕೆ ರಜೆಯನ್ನು ಪಡೆಯಲು

ಹಕ್ಕುಳ್ಳವನಾಗಿರುತ್ತಕ್ಕದ್ದು. ಈ ಉದ್ದೇಶಕ್ಕಾಗಿ ಸದರಿ ನಿಯಮಗಳ ಉಪನಿಯಮ (3)(b) ರಡಿಯಲ್ಲಿನ ವಿವರಣೆ ಮತ್ತು ಟಿಪ್ಪಣಿ-1ರಡಿಯಲ್ಲಿನ ಷರತ್ತು ಮತ್ತು ನಿರ್ಬಂಧಗಳು ಪರಿಶೀಲನಾರ್ಹವಾಗತಕ್ಕದ್ದು. ಆದ್ದರಿಂದ ಆಡಳಿತ ಇಲಾಖೆಯು ಈ ಪ್ರಕರಣದಲ್ಲಿ ಸಂಬಂಧಿತ ಬೋಧಕ ಸಿಬ್ಬಂದಿಗಳು ವಾಸ್ತವದಲ್ಲಿ ಬಿಡುವಿನ ಸಮಯದಲ್ಲಿ ಇಂತಹ ಕರ್ತವ್ಯಕ್ಕೆ, ಸಕ್ಷಮ ಪ್ರಾಧಿಕಾರದಿಂದ ನಿಯೋಜಿತಗೊಂಡಿರುವ ಬಗ್ಗೆ ಮತ್ತು ಅಂತಹ ಕರ್ತವ್ಯಗಳನ್ನು ನಿರ್ವಹಿಸಿರುವ ಕುರಿತ್ತಂತೆ ಪ್ರಕರಣದ ವಾಸ್ತವಾಂಶಗಳು ಮತ್ತು ಸೂಕ್ತ ದಾಖಲೆಗಳನ್ನು ಅವಲೋಕಿಸಿಕೊಂಡು, ನಿಯಮ 113(a)ರನ್ವಯ ಹೆಚ್ಚುವರಿ ಗಳಿಕೆ ರಜೆ ಜಮೆಗೆ ಅರ್ಹರಾಗುವ ಬಗ್ಗೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರವು ಕ್ರಮವಹಿಸುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

**(ಹೆಚ್.ಎಸ್. ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಪ್ರಾಥಮಿಕ ಶಿಕ್ಷಣ) ಶಿಕ್ಷಣ ಇಲಾಖೆ.

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-560001
ಸಂಖ್ಯೆ: 609741 , DPI-CPI0C7-2(OT)/18/2021-GRANT IN AID SEC
ದಿನಾಂಕ:08-11-2021

: : ಸುತ್ತೋಲೆ : :

ವಿಷಯ: ಅನುದಾನಿತ ಪ್ರಾಥಮಿಕ ಶಾಲಾ ಸಿಬ್ಬಂದಿಯವರು ರಜಾ ಅವಧಿಯಲ್ಲಿ ಕೋವಿಡ್-19ರ ಕಾರ್ಯದಲ್ಲಿ ಸಮೀಕ್ಷೆ ನಿರ್ವಹಣೆ ಮಾಡಿರುವುದರಿಂದ ಗಳಿಕೆ ರಜೆ ನೀಡುವ ಕುರಿತು.

ಉಲ್ಲೇಖ: 1. ಸರ್ಕಾರದ ಪತ್ರದ ಸಂಖ್ಯೆ: 245 ಪಿಬಿಎಸ್ 2020, ದಿನಾಂಕ: 22-07-2021.
2. ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ(ರಿ), ಬೆಂಗಳೂರು ಇವರ ಪತ್ರದ ದಿನಾಂಕ:30-09-2021.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಅನುದಾನಿತ ಪ್ರಾಥಮಿಕ ಶಾಲಾ ಸಿಬ್ಬಂದಿಯವರು ರಜಾ ಅವಧಿಯಲ್ಲಿ ಕೋವಿಡ್-19ರ ಕಾರ್ಯದಲ್ಲಿ ಸಮೀಕ್ಷೆ ನಿರ್ವಹಣೆ ಮಾಡಿರುವುದರಿಂದ ಗಳಿಕೆ ರಜೆ ನೀಡುವ ಕುರಿತು ಉಲ್ಲೇಖ(2)ರಂತೆ ಮನವಿ ಸಲ್ಲಿಸಿರುತ್ತಾರೆ.

ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ಕೋವಿಡ್-19ರ ಪ್ರಕರಣದಲ್ಲಿ ಸಂಬಂಧಿಸಿದ ಬೋಧಕ ಸಿಬ್ಬಂದಿಗಳು ವಾಸ್ತವದಲ್ಲಿ ಬಿಡುವಿನ ಸಮಯದಲ್ಲಿ ಇಂತಹ ಕರ್ತವ್ಯಕ್ಕೆ ಸಕ್ಷಮ ಪ್ರಾಧಿಕಾರದಿಂದ ನಿಯೋಜಿತಗೊಂಡಿರುವ ಬಗ್ಗೆ ಹಾಗೂ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಪ್ರಮಾಣ ಪತ್ರ ಪಡೆದಿರುವಂತಹ ಶಿಕ್ಷಕರು ಮತ್ತು ಸಿಬ್ಬಂದಿಗಳು ಆಡಳಿತ ಮಂಡಳಿಗೆ ಸಲ್ಲಿಸಿ, ಆಡಳಿತ ಮಂಡಳಿಯು ರಜಾ ಮಂಜೂರಾತಿ ಮಾಡುವ ಬಗ್ಗೆ ಠರಾವು ಪಾಸು ಮಾಡಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಕರ್ನಾಟಕ ಶಿಕ್ಷಣ ಕಾಯ್ದೆ ಹಾಗೂ ಕೆ.ಸಿ.ಎಸ್.ಆರ್ ನಿಯಮ-113[ಎ],[ಬಿ] ಅನ್ವಯ ನಿಯಮಾನುಸಾರ ಪರಿಶೀಲಿಸಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಗಳಿಕೆ ರಜೆಯನ್ನು ಮಂಜೂರು ಮಾಡಿ ಸೇವಾ ಪುಸ್ತಕದಲ್ಲಿ ದಾಖಲಿಸಲು ಸಂಬಂಧಿಸಿದ ಆಡಳಿತ ಮಂಡಳಿಗೆ ಅನುಮತಿ ನೀಡುವಂತೆ ಸೂಚಿಸಿದೆ.

ನಿರ್ದೇಶಕರು[ಪ್ರಾಥಮಿಕ ಶಿಕ್ಷಣ]

ಗೆ,
1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ತಾಲ್ಲೂಕು / ವಲಯಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಸಂಬಂಧಿಸಿದ ಆಡಳಿತ ಮಂಡಳಿಗಳಿಗೆ[ಕ್ಷೇತ್ರಶಿಕ್ಷಣಾಧಿಕಾರಿಗಳ ಮುಖಾಂತರ]

<u>ಪ್ರತಿಯನ್ನು:</u>

4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಧಾರವಾಡ.
5. ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ(ರಿ), ಕೊಠಡಿ ಸಂಖ್ಯೆ:1, ಕಿತ್ತೂರು ರಾಣಿ ಚನ್ನಮ್ಮ ಕ್ರೀಡಾಂಗಣ, 3ನೇ ಬ್ಲಾಕ್, ಜಯನಗರ, ಬೆಂಗಳೂರು-560011.
6. ಕಛೇರಿ ಪ್ರತಿ.